ಟಿ.ಪಿ. ಅಶೋಕ

# ಪುಸ್ತಕ ಒದಿದ್ದಕ್ಕೆ ಪುಸ್ತಕವೇ ಸಾಕ್ಷಿ

ದಿವಾಕರ್ ಸಾಹಿತ್ಯ ಚರಿತ್ರೆಯ, ಸಂಸ್ಕೃತಿ ಚರಿತ್ರೆಯ ಮಾದರಿಯೊಂದನ್ನೇ ಇಲ್ಲಿ ಸೂಚಿಸಿಬಿಟ್ಟಿದ್ದಾರೆ. ಇದು ಅವರ ಪ್ರಬಂಧಗಳ ಪ್ರಾಮುಖ್ಯ ಮತ್ತು ವೈಶಿಷ್ಟ್ಯ.

ಕೆಲವರು ಪುಸ್ತಕಗಳನ್ನು ಕೊಳ್ಳುತ್ತಾರೆ, ಆದರೆ, ಓದುವುದಿಲ್ಲ. ಲೇಖಕರಿಗೆ, ಪ್ರಕಾಶಕರಿಗೆ ಬೆಂಬಲ ಸೂಚಿಸಲೋಸುಗ ಕೆಲವರು ಪುಸ್ತಕಗಳನ್ನು ಖರೀದಿಸಿದರೆ ಮತ್ತೆ ಕೆಲವರು ಅವುಗಳನ್ನು ತಮ್ಮ ಷೋಕೇಸಿನಲ್ಲಿ ಅಲಂಕಾರದ ವಸ್ತುಗಳೆಂಬಂತೆ ಪ್ರದರ್ಶಿಸಲು ಕೊಳ್ಳುತ್ತಾರೆ. ತಾವು ಸುಸಂಸ್ಕೃತರೆಂದು ತೋರಿಸಿಕೊಳ್ಳಲು ಇದು ಕೆಲವರಿಗೆ ಸುಲಭದ ದಾರಿ. ಮತ್ತೆ ಕೆಲವರು ಪುಸ್ತಕಗಳನ್ನು ಕೊಂಡು ಓದುತ್ತಾರೆ; ಅನೇಕರು ತಾವು ಓದಿದ ಪುಸ್ತಕದ ಬಗ್ಗೆ ತಮ್ಮ ಸುತ್ತಲಿನವರೊಂದಿಗೆ ಮಾತನಾಡುತ್ತಾರೆ. ಕೆಲವೇ ಕೆಲವರು ಓದಿದ ಪುಸ್ತಕಗಳ ಬಗ್ಗೆ ಲೇಖನಗಳನ್ನು ಬರೆದು ಪ್ರಕಟಿಸುತ್ತಾರೆ. ಇನ್ನೂ ಒಂದು ವರ್ಗವಿದೆ. ಅವರು ಪುಸ್ತಕ ಓದುತ್ತಿರುವಂತೆಯೇ ಪುಸ್ತಕದ ಖಾಲಿ ಜಾಗಗಳಲ್ಲಿ ತಮ್ಮ ಟಿಪ್ಪಣಿ, ಪ್ರಶ್ನೆ, ಸಂದೇಹ, ಮೆಚ್ಚುಗೆಗಳನ್ನು ಸಣ್ಣ ಅಕ್ಷರಗಳಲ್ಲಿ ದಾಖಲಿಸುತ್ತಾ ಹೋಗುತ್ತಾರೆ. ಆ ಪುಸ್ತಕ ಬೇರೆಯವರ ಕೈಗೆ ಸಿಕ್ಕಾಗ ಆ ಪುಸ್ತಕದ ಬಗ್ಗೆ ಅವರ ಅಭಿಪ್ರಾಯ, ಒಟ್ಟಾರೆ ಅವರ ಅಭಿರುಚಿ, ಆದ್ಯತೆಗಳು ತಿಳಿದು ಬರುತ್ತವೆ. ಪುಸ್ತಕದ ಒಳಗೇ ಆ ಓದುಗನ ಪ್ರತಿಕ್ರಿಯೆ–ಪ್ರತಿಸ್ಪಂದನೆಗಳು ದಾಖಲಾಗಿರುವ ಹಲವು ಪುಸ್ತಕಗಳ ಮತ್ತು ಆಯಾ ಓದುಗರನ್ನು ಕುರಿತು ಹಿರಿಯ ಪತ್ರಕರ್ತ, ಅಂಕಣಕಾರ, ವಿಮರ್ಶಕ ಎಸ್. ದಿವಾಕರ್ ಒಂದು ದೀರ್ಘ ಲೇಖನವನ್ನೇ ಬರೆದಿದ್ದಾರೆ. ಆ ಲೇಖನದ ಹೆಸರು 'ಪುಸ್ತಕ ಓದಿದ್ದಕ್ಕೆ ಪುಸ್ತಕವೇ ಸಾಕ್ಷಿ'. ಅದು ಅವರ ಪ್ರಬಂಧಗಳ ಸಂಕಲನದ ಶೀರ್ಷಿಕೆಯೂ ಹೌದು. ಇದು ತುಂಬ ಧ್ವನಿಪೂರ್ಣ ಶೀರ್ಷಿಕೆ. ಈ ಮಾತು ದಿವಾಕರ್ ಪ್ರಸ್ತಾಪಿಸುವ ಓದುಗರ ಬಗ್ಗೆ ಎಷ್ಟು